**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 8 ನೇ ಸೆಪ್ಟಂಬರ್ 2025**

**ಅಸಲು ದಾವೆ ಸಂಖ್ಯೆಃ 49/2019**

**ವಾದಿ -**

ಎನ್.ಪಿ. ವೀರಭದ್ರಪ್ಪ

**ವಿರುದ್ಧ**

**ಪ್ರತಿವಾದಿಗಳು -**

ಎನ್.ಪಿ ಚಂದ್ರಶೇಖರಪ್ಪ ಮೃತಪಟ್ಟಿದ್ದು ಅವನ
ವಾರಸುದಾರರು 1(ಎ) ಹೆಚ್ ಶಿವಲೀಲ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-9**

**ಅರ್ಜಿದಾರ / 1(ಎ) ನೇ ಪ್ರತಿವಾದಿ**

ಶ್ರೀಮತಿ ಹೆಚ್. ಶಿವಲೀಲಾ ಗಂಡ ಎನ್.ಪಿ ಚಂದ್ರಶೇಖರಪ್ಪ,
ವಯಸ್ಸು ಸುಮಾರು 63 ವರ್ಷ,
ಮನೆಗೆಲಸ,
ವಾಸಃ ಗುಡ್ಡದ ನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

**(ಅರ್ಜಿದಾರಳ ಪರ ವಕೀಲರು - ಶ್ರೀ ಸಿ. ಬಸವರಾಜು)**

**ವಿರುದ್ಧ**

**ಎದುರುದಾರರು/ ವಾದಿ**

ಎನ್.ಪಿ. ವೀರಭದ್ರಪ್ಪ ತಂದೆ ಎನ್.ಸಿ. ಪರಪ್ಪ,
ವಯಸ್ಸು ಸುಮಾರು 67 ವರ್ಷ,,

ವ್ಯವಸಾಯ,
ವಾಸಃ ಗುಡ್ಡದನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**(ಎದುರುದಾರರ ಪರ ವಕೀಲರು - ಶ್ರೀ ಎಂ.ಎಸ್.ಸದ್ಯೋಜಾತ)**

**<u>ಮಧ್ಯಂತರ ಅರ್ಜಿ ಸಂಖ್ಯೆ 9 ರ ಮೇಲೆ ಆದೇಶ</u>**

ಅರ್ಜಿದಾರ/1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿ ಸಂಖ್ಯೆ 9 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಂಚಿಕೆಯಾದ ಹಿಸ್ಸೆಯ ಆಸ್ತಿಗಳನ್ನು ತಾನು ಡಿ.ಸಿ. ಸಿದ್ದಲಿಂಗಸ್ವಾಮಿ ತಂದೆ ಡಿ.ಆರ್. ಚನ್ನಬಸಪ್ಪ ಇವನಿಗೆ ಮೃತ್ಯು ಪತ್ರದ ಮೂಲಕ ವರ್ಗಾವಣೆ ಮಾಡಲು ಅನುಮತಿಸಬೇಕೆಂದು ಕೋರಿರುತ್ತಾಳೆ.

**2.** ಈ ಮಧ್ಯಂತರ ಅರ್ಜಿಯನ್ನು 1(ಎ)ನೇ ಪ್ರತಿವಾದಿ ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

**3.** ಎದುರುದಾರ/ವಾದಿ ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**4.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರ/1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಂಚಿಕೆಯಾದ ಹಿಸ್ಸೆಯ ಆಸ್ತಿಗಳನ್ನು ತಾನು ಡಿ.ಸಿ. ಸಿದ್ದಲಿಂಗಸ್ವಾಮಿ ತಂದೆ ಡಿ.ಆರ್. ಚನ್ನಬಸಪ್ಪ ಇವನಿಗೆ ಮೃತ್ಯು ಪತ್ರದ ಮೂಲಕ ವರ್ಗಾವಣೆ ಮಾಡಲು ಅನುಮತಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾಳೆಯೇ?

ಅಂಶ- 2- ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ನಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆಃ

**ಕಾರಣಗಳು**

**7. ಅಂಶ-1 –** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ತನಗೆ ¼ ಭಾಗ ಮತ್ತು ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುವ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು

ತೆಗೆದುಕೊಂಡಿರುತ್ತಾನೆ. ಈಗ 1 ನೇ ಪ್ರತಿವಾದಿ ಮೃತಪಟ್ಟಿದ್ದರಿಂದ ಅವನ ವಾರಸುದಾರಳಾದ ಅರ್ಜಿದಾರಳು/1(ಎ)ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿದ್ದು, ಈಗ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಂಚಿಕೆಯಾದ ಹಿಸ್ಸೆಯ ಆಸ್ತಿಗಳನ್ನು ತಾನು ಡಿ.ಸಿ. ಸಿದ್ದಲಿಂಗಸ್ವಾಮಿ ತಂದೆ ಡಿ.ಆರ್. ಚನ್ನಬಸಪ್ಪ ಇವನಿಗೆ ಮೃತ್ಯು ಪತ್ರದ ಮೂಲಕ ವರ್ಗಾವಣೆ ಮಾಡಲು ಅನುಮತಿಸಬೇಕೆಂದು ಕೋರಿರುತ್ತಾಳೆ.

**8.** ಅರ್ಜಿದಾರ / 1 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಗಳನ್ನು ದಿನಾಂಕಃ 28-07-1987 ರಲ್ಲಿ ನೊಂದಣಿಯಾಗದೇ ಇರುವ ಪಾಲುವಿಭಾಗ ಪತ್ರದ ಮೂಲಕ, ಭಾಗವನ್ನು ಮಾಡಿಕೊಂಡಿದ್ದು, ಅದರಂತೆ ವಾದಿ ಮತ್ತು ಪ್ರತಿವಾದಿಗಳು ತಮ್ಮ ಹಿಸ್ಸೆಯನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದಾರೆ. ಸದರಿ ಪಾಲು ವಿಭಾಗವಾದ ನಂತರ 1 ನೇ ಪ್ರತಿವಾದಿ ದಾವಾ 8 ಮತ್ತು 9 ನೇ ಆಸ್ತಿಗಳನ್ನು ಬಿ.ಎಂ.ಶಾಂತ ಗಂಡ ಎ.ಎಂ.ಶಿವಸ್ವಾಮಿ ಇವರಿಂದ ದಿನಾಂಕಃ 20-04-2009 ರಂದು ಖರೀದಿಸಿದ್ದು, ದಾವಾ 13 ನೇ ಆಸ್ತಿಯು ಸ್ವಯಾರ್ಜಿತವಾದ ಆಸ್ತಿಗಳಾಗಿರುವುದರಿಂದ ವಾದಿ ಮತ್ತು 2 ರಿಂದ 4 ನೇ ಪ್ರತಿವಾದಿಗಳಿಗೆ ಸದರಿ ಆಸ್ತಿಗಳ ಮೇಲೆ ಯಾವುದೇ ರೀತಿಯ ಹಕ್ಕು ಇರುವುದಿಲ್ಲ. ಆದ್ದರಿಂದ, ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಂಚಿಕೆಯಾದ ಹಿಸ್ಸೆಯ ಆಸ್ತಿಗಳನ್ನು ಅರ್ಜಿದಾರಳು ಡಿ.ಸಿ. ಸಿದ್ದಲಿಂಗಸ್ವಾಮಿ ತಂದೆ ಡಿ.ಆರ್. ಚನ್ನಬಸಪ್ಪ ಇವನಿಗೆ ಮೃತ್ಯು ಪತ್ರದ ಮೂಲಕ ವರ್ಗಾವಣೆ ಮಾಡಲು ಅನುಮತಿಸಬೇಕೆಂದು ಮತ್ತು ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ, ಅರ್ಜಿದಾರಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** ಎದುರುದಾರ/ ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 1(ಎ) ನೇ ಪ್ರತಿವಾದಿಯು ಈ ಮಧ್ಯಂತರ ಅರ್ಜಿಯೊಂದಿಗೆ ಸಲ್ಲಿಸಿರುವ ತನ್ನ ಪ್ರಮಾಣಪತ್ರದಲ್ಲಿ ಸುಳ್ಳು ಅಂಶಗಳನ್ನು ಹೇಳಿರುತ್ತಾಳೆ. ಪಾಲುವಿಭಾಗ ಆಗಿರುವುದನ್ನು ಉಭಯಪಕ್ಷಗಾರರು ತಮ್ಮ ಸಾಕ್ಷಿಯ ಮೂಲಕ ಸಾಬೀತುಪಡಿಸಬೇಕು, ಅದಕ್ಕೆ ಸಂಪೂರ್ಣ ಸಾಕ್ಷಿ ವಿಚಾರಣೆ ಅವಶ್ಯವಿರುತ್ತದೆ. ಅಲ್ಲದೆ ಅರ್ಜಿದಾರಳು ಯಾವುದೇ ಆಸ್ತಿಗೆ ಸಂಪೂರ್ಣ ಮಾಲಕಳು ಅಲ್ಲ. ಆದ್ದರಿಂದ, ಮೃತ್ಯು ಪತ್ರ ಬರೆದುಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಾರಣ, ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10.** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳೆಂದು ಆರೋಪಿಸಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ, ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುಮ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದರಿಂದ, ಈ ದಾವೆಯಲ್ಲಿ ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಪ್ರಶ್ನೆಗಳೆಂದರೆ ದಾವಾ ಆಸ್ತಿಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೋ ಅಥವಾ 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ದಿನಾಂಕಃ 28-07-1983 ರಲ್ಲಿ ಪಾಲುವಿಭಾಗವಾಗಿ ಅದರಂತೆ, ತಮ್ಮ ಹಿಸ್ಸೆಯ ಪ್ರತ್ಯೇಕ ಸ್ವಾಧೀನ ಹೊಂದಿರುತ್ತಾರೋ ಅಥವಾ ಇಲ್ಲ ಎನ್ನುವುದಾಗಿದ್ದು, ಆದರೆ ಅರ್ಜಿದಾರಳು/ 1(ಎ)ನೇ ಪ್ರತಿವಾದಿ ಈ

ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಮೃತ 1 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಹಂಚಿಕೆಯಾದ ಹಿಸ್ಸೆಯ ಆಸ್ತಿಗಳನ್ನು ತಾನು ಡಿ.ಸಿ. ಸಿದ್ದಲಿಂಗಸ್ವಾಮಿ ತಂದೆ ಡಿ.ಆರ್. ಚನ್ನಬಸಪ್ಪ ಇವನಿಗೆ ಮೃತ್ಯು ಪತ್ರದ ಮೂಲಕ ವರ್ಗಾವಣೆ ಮಾಡಲು ಅನುಮತಿಸಬೇಕೆಂದು ಕೋರಿರುತ್ತಾಳೆ. ಆದರೆ, ಈ ದಾವೆ ಇನ್ನು ಅಂತಿಮವಾಗಿ ಇತ್ಯರ್ಥಗೊಂಡು ಮೃತ 1 ನೇ ಪ್ರತಿವಾದಿಯ ಹಿಸ್ಸೆಗೆ ದಾವಾ ಆಸ್ತಿಗಳಲ್ಲಿ ಭಾಗ ದಿನಾಂಕಃ 28-07-1983 ರಂದು ಆದ ಪಾಲುವಿಭಾಗದಂತೆ ಬಂದಿರುತ್ತವೆ ಎಂದು ತೀರ್ಮಾನವಾಗಿಲ್ಲ. ಅಲ್ಲದೆ, ಯಾವುದೇ ಒಬ್ಬ ವ್ಯಕ್ತಿ ಮತ್ತು ಪತ್ರವನ್ನು ಬರೆಯಲು ಅಂತಹ ಆಸ್ತಿಗಳ ಮೇಲೆ ಹಕ್ಕನ್ನು ಹೊಂದಿದ್ದರೆ ಅವನು ತನಗೆ ಇಷ್ಟವಾದ ವ್ಯಕ್ತಿಗಳ ಪರ ಯಾರದೇ ಒತ್ತಡವಿಲ್ಲದೆ ತನ್ನ ಸ್ವಇಚ್ಚೆಯಿಂದ ತನ್ನ ಹಕ್ಕಿಗೆ ಒಳಪಟ್ಟ ಆಸ್ತಿಗಳ ಮೇಲೆ ಮೃತ್ಯು ಪತ್ರವನ್ನು ಬರೆಯಬಹುದಾಗಿದ್ದು, ಅದಕ್ಕೆ ಯಾವುದೇ ನ್ಯಾಯಾಲಯ ಅಥವಾ ಬೇರೆ ಯಾವ ವ್ಯಕ್ತಿಯ ಅನುಮತಿಯ ಅವಶ್ಯಕತೆ ಇರುವುದಿಲ್ಲ. ಅದು ಸಂಪೂರ್ಣವಾಗಿ ಯಾರು ಮೃತ್ಯು ಪತ್ರವನ್ನು ಬರೆಯಲು ಭಯಸಿರುತ್ತಾರೋ ಅಂಥವರ ಇಚ್ಚೆಗೆ ಒಳಪಟ್ಟದ್ದಾಗಿರುತ್ತದೆ. ಆದರೆ, ಈ ಕೇಸಿನಲ್ಲಿ ದಾವಾ ಆಸ್ತಿಗಳು ವಾದಪತ್ರದಲ್ಲಿ ಆರೋಪಿಸಿದಂತೆ ಪಾಲುವಿಭಾಗ ಆಗಿದೆ ಅಥವಾ ಆಗಿಲ್ಲ ಮತ್ತು ಅವುಗಳಲ್ಲಿ ವಾದಿಗೆ ಹಿಸ್ಸೆ ಇದೆ ಅಥವಾ ಇಲ್ಲ ಎನ್ನುವುದು ಇನ್ನೂ ಇತ್ಯರ್ಥವಾಗಿಲ್ಲದ ಕಾರಣ, ಈ ಮಧ್ಯಂತರ ಅರ್ಜಿ ಪುರಸ್ಕರಿಸುವಂತಹದು ಅಲ್ಲ. ಅಲ್ಲದೆ, ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದಲೂ ಸಹ ಈ ಮಧ್ಯಂತರ ಅರ್ಜಿ ಪುರಸ್ಕರಿಸುವಂತಹದು ಅಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ಅರ್ಜಿದಾರಳು ತೋರಿಸಿಲ್ಲವಾದ ಕಾರಣ, **ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**11.** **ಅಂಶ-2** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದೆ:

**ಆದೇಶ**

ಅರ್ಜಿದಾರಳು/1(ಎ)ನೇ ಪ್ರತಿವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ-9 ನ್ನು 100/- ರೂಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ **8 ನೇ ಸೆಪ್ಟಂಬರ್ 2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**